118(2)

"SATYAVADI" Founded 1917 Regd. No. M. 1299

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟುದು)

ಸಂವುಟ 29 ಸಂಚಿಕೆ 27] ಗುರುವಾರ 18—10—45 [ಬಿಡಿ ಪ್ರತಿ 3 ಪೈ

ವರ್ತಮಾನ ಸಂಗ್ರಹ

ಪಂ || ಜವಹರಲಾಲರು ಅಜಮೂಗರ್ ನಗರದಲ್ಲಿ ಮಾಡಿದ ಭಾಷಣವನ್ನು ಕೇಳಲು 80 ಸಾವಿರ ಜನರು ಸೇರಿದ್ದರಂತೆ. ಈ ಪೈಕಿ ಬಹು ಮಂದಿ ಮುಸ್ಲಿಮರೂ ಇದ್ದರು. ಶ್ರೀ ನೆಹರೂರವರಿಗೆ ಅತ್ಯ ಕಡೆ ಪ್ರವಾಸದಲ್ಲಿ ನಿಧಿಗಳು ಅರ್ಪಿಸಲಾಗುತ್ತಿವೆ.

ಂ ಂ

ಬೆಲ್ಸ್ ಶಿಬಿರದಲ್ಲಿ ಮಿಲಿಟರಿ ಅಧಿಕಾರಿಗಳ ದುರ್ವರ್ತನೆಯನ್ನು ಖಂಡಿಸಿ ಲು 12 ಸಾವಿರ ಮಂದಿ ಖೈದಿಗಳು ಅನ್ನ ಸತ್ಯಾಗ್ರಹ ಮಾಡಿದರು.

ಂ ಂ

ಪ್ಯಾಲಿಸ್ಟೈನ್— ಯುದ್ಧ ಸಾಮಗ್ರಿಗಳನ್ನು ಒಯ್ಯುತ್ತಿದ್ದ ಬ್ರಿಟಿಷ್ ಟ್ರಕ್ ಒಂದನ್ನು ತಡೆಯಲು ಯಹೂದ್ಯರು ಮಾಡಿದಪ್ರಯತ್ನವು ವಿಫಲವಾಯಿತು.

ಂ ಂ

ಹೈಫಾದಲ್ಲಿ ಕಾನೂನಿಗೆ ವಿರುದ್ಧವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದರೆಂಬ ಆಪಾದನೆಗಾಗಿ 18 ನುಂದಿ ಯಹೂದ್ಯ ಯುವಕರೂ ಇಬ್ಬರು ಯುವತಿಯರಿಗೂ ತಲಾ 3 ವರ್ಷ ಕಠಿಣ ಸಜಾ ವಿಧಿಸಲಾಗಿದೆ.

ಂ ಂ

ಬೆಂಗಳೂರು— ತಾಯಿನಾಡು ಪತ್ರಿಕೆಯ ಸಂಪಾದಕರಾದ ಶ್ರೀ ಪಿ. ಬಿ. ಶ್ರೀನಿವಾಸನ್ನರು ಸುಪ್ರೀಂ ಈಸ್ಟ್ ಏಷ್ಯಾ ಕಮ್ಯಾಂಡಿನಲ್ಲಿ 'ಮಿಲಿಟರಿ ಬಾತ್ಮೀದಾರರಾಗಿ ಕ್ಷಿಪ್ರದಲ್ಲೇ ತೆರಳುವರೆಂದು ತಿಳಿಯಬಂದಿದೆ

ಂ ಂ

ಅಹಮದಾಬಾದ್ ಆಜಾದ್ ಮುಸ್ಲಿಂ ಸಭೆಯಲ್ಲಿ ಕಲ್ಲುಗಳು ಎಸೆದಾಡಲ್ಪಟ್ಟವು. ಪೋಲೀಸ್ ಇನ್ಸ್ಪೆಕ್ಟರಿಗೂ ವತ್ತಿತರ 12 ಮಂದಿಗೂ ಗಾಯವಾಗಿದೆ.

ಂ ಂ

ಟೋಕಿಯೋ— ಜಪಾನಿನಲ್ಲಿ ಅಹಾರಾಭಾವನನ್ನು ತೋರ್ಪಡಿಸಲು ಮೂರು ಸಾವಿರ ಮಂದಿ ಜಪಾನೀಯರು ರಸ್ತೆಗಳಲ್ಲಿ ಪ್ರದರ್ಶನ ನಡೆಸಿ ಅಲ್ಲಿಯ ನಗರ ಉದ್ಯಾನವನದಲ್ಲಿ ಭಾರಿ ಸಭೆ ಬರುಗಿಸಿದರು.

ಂ ಂ

ಕಾಶಿ— ಕಾಂಗ್ರೆಸ್ಸಿಗೇ ಓಟು ಕೊಡಿರೆಂದು ಪಂ || ಮದನ ಮೋಹನ ಮಾಳವ್ಯರವರು ಜನರನ್ನು ಪ್ರಾರ್ಥಿಸಿದಾರೆ.

ಪಾಲಿಸ್ತೇನಿನ ಪ್ರಕರಣ
ಶಾಂತಿ

ಜರೂಸೆಲಂ ನಗರವನ್ನು ಅರಬ್ಬಿಯರು, ಯಹೂದ್ಯರು ಮತ್ತು ಕ್ರಿಶ್ಚಿಯನ್ನರು ವಿಭಾಗಿಸಿಕೊಳ್ಳಿಮೂರು ಮುನಿಸಿಪಾಲಿಟಿ ಸ್ಥಾಪಿಸುವ ಯೋಜನೆ ನಡೆದಿದೆ.

ಂ ಂ

ಅಟ್ಲಾಂಟಿಕ್ ಮತ್ತು ಪೆಸಿಫಿಕ್ಕಿನಲ್ಲಿರುವ ಕೆಲವು ಬ್ರಿಟಿಷ್ ಮತ್ತು ಫ್ರೆಂಚ್ ಸ್ವಾಧೀನಗಳನ್ನು ಅಮೇರಿಕಾ ಪಡೆಯಲು ರಹಸ್ಯವಾಗಿ ಸಂಧಾನ ನಡೆಸಲಾಗುತ್ತಿದೆಯೆಂದು ಹೇಳಲಾಗಿದೆ.

ಂ ಂ

ಸಾಂಗ್ಲೀ ತಿಲಕ್ ಮಂದಿರದ ಮೇಲೆ ಹಾರಾಡುತ್ತಿದ್ದ ತ್ರಿವರ್ಣ ಬಾವುಟವನ್ನು ಯಾರೋ ಸುಟ್ಟುಹಾಕಿರುವರೆಂದೂ, ಪೋಲೀಸರು ತನಿಖೆ ನಡೆಸುತ್ತಿರುವರೆಂದೂ, ಮತ್ತೊಂದು ಬಾವುಟವನ್ನು ಮೆರವಣಿಗೆಯಲ್ಲಿ ತೆಗೆದುಕೊಂಡುಹೋಗಿ, ಅಲ್ಲಿ ಇಡುವರೆಂದೂ ವರದಿಯಾಗಿದೆ,

ಂ ಂ

ಅಲಹಾಬಾದಿನ ಕರ್ನಾಟಕ ಸಂಘದವರು ನಾಡಹಬ್ಬವನ್ನು ನೆರವೇರಿಸಿದರೆಂದು ತಿಳಿಯಬಂದಿದೆ.

ಂ ಂ

ಭಾರತದ ಮುಂದಿನ ಕಾನೂನು ಭಂಗ ಬಳವಳದಲ್ಲಿ ಭಾರತೀಯ ಸೈನಿಕರೂ ಸೇರಬಹುತೆನೆದು ಒಬ್ಬ ಬ್ರಿಟಿಷ್ ಅಧಿಕಾರಿಯು ಎಚ್ಚರಿಕೆ ಕೊಟ್ಟಿರುವನು.

ಂ ಂ

ಆಪಾದಿತನಾಗಿರುವ ಇಂಡಿಯನ ನ್ಯಾಷನಲ್ ಆರ್ಮಿ ಆಫೀಸರುಗಳನ್ನು ಭೇಟಿ ಮಾಡಲು ಪಂಡಿತ ನೆಹರೂರವರಿಗೆ ಸರಕಾರದ ಅನುಮತಿ ದೊರೆತಿರುವುದೆಂದು ಹೇಳಲಾಗಿದೆ.

ಬ್ರಿಟನ್ನಿನಲ್ಲಿ ಕಾರ್ಮಿಕರ ಸೊಂಪು ಇನ್ನೂ ನಿಂತಿಲ್ಲ.

.....

ಅಣು ಬಾಂಬಿನ ವಿರುದ್ಧವಾವುದೂ ಇಲ್ಲವೆಂದು ದಾಷಿಂಗ್ಟನ್ನಿನ ವಾರ್ತೆ.

.....

ಅಣು ಬಾಂಬು ತಯಾರಿಸಲು ಅಮೆರಿಕಾ ವಿನಃ ಮತ್ಯಾವ ದೇಶದಲ್ಲೂ ಉತ್ಕೃಷ್ಟವಾದ ಕಾರ್ಖಾನೆಯಿಲ್ಲವೆಂದು ವಾಷಿಂಗ್ಟನ್ ವಾರ್ತೆ.

.....

ಆಟಂ ಬಾಂಬು ಪರಿಶೋಧನೆ ಕಾರ್ಯಕ್ಕಾಗಿ ಇಂಗ್ಲೆಂಡು 2 ಕೋಟಿ ಪೌಂಡುಗಳನ್ನೂ ಮತ್ತು ಅಮೇರಿಕಾವು 2 ಅರ್ಬುದ ಡಾಲರುಗಳನ್ನು ಖರ್ಚು ಮಾಡಿವೆಯಂತೆ.

—....

ಆಟಂ ಬಾಂಬಿನ ರಕ್ಷಣ ಹೊಂದಲು ಕೆಲ ದೇಶಗಳಲ್ಲಿ ಈಗಿನಿಂದಲೇ ಭೂಗರ್ಭಿಕ ಪಟ್ಟಣಗಳನ್ನು ನಿರ್ಮಾಣ ಮಾಡಲು ಪ್ರಯತ್ನಗಳು ನಡೆಯುತ್ತಲಿವೆ.

———

ಮೈಸೂರು ಸಿಟಿ ಜವಳೀ ವರ್ತಕರ ಸಂಘ

ಮೈಸೂರು ಸಿಟಿ ಜವಳಿ ವರ್ತಕರ ಸಂಘದ ದ್ವಿತೀಯ ವಾರ್ಷಿಕೋತ್ಸವವು ನ್ಯಾಯ ಮತ್ತು ಸಿವಿಲ್ ಸಪ್ಲೈ ಸಚಿವರಾದ ಎಂ || ಓ. ಎಸ್. ನಸರುಲ್ಲಾ ಷರೀಫ್, ಎಂ. ಎ, ಎಲ್ ಎಲ್, ಬಿ, ಯವರ ಅಧ್ಯಕ್ಷತೆಯಲ್ಲಿ ತಾ || 21 ನೇ ಭಾನುವಾರ ನಡೆಸಲ್ಪಡುವುದರಿಂದ, ಆದಿನ ಸಂಘದ ಸದಸ್ಯರಿಗೆಲ್ಲಾ ರಜಾದಿನವಾಗಿರುತ್ತಾಗಿ, ರಾಜಧಾನಿಯ ಎಲ್ಲಾ ಒಟ್ಟೆ ಅಂಗಡಿಗಳೂ ಮುಚ್ಚಲ್ಪಟ್ಟಿರುತ್ತವೆಂದು ಸಂಘದ ಸೆಕ್ರಿಟರಿಯವರು ತಿಳಿಸಿರುತ್ತಾರೆ.

ಪ್ರಜಾಪ್ರತಿನಿಧಿ ಸಭೆ

ಮೈಸೂರು, ಅ 18 — ಶ್ರೀ ಪುಲ್ಲರೆಡ್ಡಿಯವರ ಅಧ್ಯಕ್ಷತೆಯಲ್ಲಿ ಈ ದಿವಸ ಅಂಸುಮು ದಿವಸದ ಕಾರ್ಯಕ್ರಮಗಳು ನಡೆದವು

ಲಂಚ ನಿರೋಧ ಪ್ರಶ್ನೆಗಳನ್ನು ಕೇಳಿದ ಶ್ರೀ ದೇವಕೊಂಡಪ್ಪನವರಿಗೆ ಸರಕಾರದ ಪರ ಶ್ರೀ ಮುಲ್ಲರಾಧ್ಯರು ಉತ್ತರಕೊಡುತ್ತಾ, ' ಲಂಚ ನಿರೋಧ ಸಮಿತಿ ಉದಾರ ನೀತಿಯ ಮೇಲೆ ಸ್ಥಾಪಿತವಾಗಿದೆ ಹೊಟ್ಟೆಗಾಗಿ ತೆಗೆದ ಕೊಳ್ಳುವುದನ್ನು ಸಹಾ ಲಂಚವೆಂದು ಪರಿಗಣಿಸಲಾಗುವುದು. ಸಮಿತಿಯ ವರದಿಯು ಸದ್ಯದಲ್ಲಿಯೇ ಬರುವುದು. ಇಲ್ಲಿಯು ವರಗೆ ಸಲಹಾ ಸಮಿತಿ ಸಂಭಾವನೆ ಏನೂ ಇಲ್ಲ ಕಾಂಗ್ರೆಸ್ ಸ್ನೇಹಿತರು ಸಮಿತಿಗೆ ಬಂದರೆ ಸಂತೋಷ ಮಿಕ್ಕವರು ಬಾಯಿಬಿಡುವಹೊತ್ತಿಗೆ ಇದರಲ್ಲಿ ಸ್ಥಾನ ಸಿಕ್ಕಿತು. ಸಾಕ್ಷಿಗಳ ರಕ್ಷಣೆಯ ಬಗ್ಗೆ ಅಧ್ಯಕ್ಷರಿಂದ ಸಿಫಾರಸು ಬರಲಿ. ನಾವು ಪರೀಕ್ಷಿಸುತ್ತೇವೆ. ಹರಿಜನರನ್ನು ಪ್ರಕಟಿಯೊಂದಕ್ಕೂ ಸೇರಿಸಲು ಸಾಧ್ಯವಿಲ್ಲ ' ಎಂದರು

ಶ್ರೀ ಗುಪ್ತರು ಗ್ರೇಟ್ ಬ್ರಿಟನ್ ದಿ ಈಸ್ಟ್ ಎಂಬ ಮ್ಯಾಗ್ಸಿನಿನಲ್ಲಿ ಒಬ್ಬ ವ್ಯಕ್ತಿಯನ್ನು (ದಿವಾನ್ ಮಾಧವರಾಯರು) ಚರ್ಚಿಲ್ ಆಫ್ ಮೈಸೂರ್ ಎಂಬುದಾಗಿ ಕರೆದಿರುವರು. ಇದರಲ್ಲಿ ಮೈಸೂರ್ ಆಫೀಸರ್ಸ್‌ಗಳ ಕಾಂಟ್ರಿಬ್ಯೂಷನ್‌ಗಳಿವೆ ಈ ಪ್ರಶಸ್ತಿಯನ್ನು ಯಾರೂ ಯಾರಿಗೂ ಕೊಡಲಿಲ್ಲವೆಂತ ಹೇಳಿದರಿ ನಿಮಗೆ ಅದು ಹಿತವೇ ?

ಉ ಪ್ಯಾಪರ್ ಅಲ್ಲ

ಪ್ರ ಪ್ಯಾಪರ್ ಅಲ್ಲ ಅನ್ನೆ ಬೇದಿ ಪ್ರಶ್ನೆ ಏಳುವುದಿಲ್ಲ ಅನ್ನಿ

ಉ ಅಲ್ಲಿ

ಪ್ರ ಇಡೀ ಮೈಸೂರು ಪಬ್ಲಿಕೇಶನ್ನೇ

ಅ ಉ ನಮ್ಮ ಜವಾಬ್ದಾರಿಯಿಲ್ಲ

ಪ್ರ ಇದಕ್ಕೆ ರಾಜಸಂದೇಶವಿದೆ.

ಉ ಇದೆ

ಪ್ರ ಇದರಿಂದ ನಮ್ಮ ಸರ್ಕಾರಕ್ಕೆ ಧಕ್ಕೆ ತಗಲಿಲ್ಲವೇ

ಉ ಅಭಿಪ್ರಾಯ

ಪ್ರ ಧಕ್ಕೆಯಿದ್ದಲ್ಲಿ ಚರ್ಯೆ ತೆಗೆದುಕೊಳ್ಳುವಿರಾ

ಉ ಹೈಪಾತಿಟಿಕಲ್ ಕೊಶ್ಚನ್ನು

ಪ್ರ ಇವು ಕೊಂಡವೇ

ಉ ಕೆಲವು ಬಂದಿವೆ

ಪ್ರ ಫ್ರೀ ಬಂತೆ

ಉ ನೋಟೀಸ್

ಪಾವುಗಡ ಸಂಜುಂಡರಾಯರು ಈ ಸಂಚಿಕೆಯಲ್ಲಿ ಪ್ರಭುಗಳ ಫೋಟೋಯಿದೆ ನೋಡಿ ಎಂದು ತೋರಿಸಿದರು

ಆವರಲ್ಲಿ ಮೈಸೂರು ಕಾಂಗ್ರೆಸಿನ ಫೋಟೋ ಹಾಕಿ ಎಟ್ಲಿ ಎಂದು ಬರೆದಿದೆಯೇ ಎಂದರು ಭೂಪಾಳಂ

ಸಭೆ ನಕ್ಕು ಬಿಟ್ಟಿತು

ಮಾತೃಭೂಮಿಯಲ್ಲಿ ತಪ್ಪು ವರದಿ ಆಚ್ಛಾಗಿರುವುದಾಗಿ ವೆಂಬ್ಯು ಬಬ್ಬರು ಪ್ರೆಸಿಡೆಂಟರ ಗಮನಕ್ಕೆ ತಂದರು

ಹಿಂದಿನಂತೆಯೇ ಎಲಕ್ಷನ್ ನಡೆಯುವಂತೆ ಮಹನೀಯರ ಸೆಪ್ರೇಟ್ ಎಲಕ್ಷನ್ ಆರಿಸಿ ಬಗ್ಗೆ ಅಯ್ಯಂಗಾರು ಹೇಳಿದರು ಅಡಿಕೆ ಧರಾವು ಪಾಸಾಯಿತು

ಕೆಂಪಿನ ಶ್ರೀ ಕೃಷ್ಣ ವಿಗ್ರಹ

ಈ ಸಾರಿ ವಸ್ತು ಪ್ರದರ್ಶನದಲ್ಲಿ ಕಡಲೂರಿನ ಶ್ರೀ ಪಿ. ಟಿ. ರಾಘವನ್ನರವರು 500 ವರ್ಷಗಳ ಪುರಾತನ ಕೆಂಪು ರತ್ನದ ಶ್ರೀಕೃಷ್ಣ ವಿಗ್ರಹವನ್ನು ಪ್ರದರ್ಶಿಸಿರುವರು. ಈ ಅಮೋಘ ವಸ್ತುವನ್ನು ಬಹುಮಂದಿ ನೋಡಿ ಆತ್ಯಾನಂದ ಭರಿತರಾಗಿರುವರು. ಈ ಸಲದ ವಸ್ತು ಪ್ರದರ್ಶನಕ್ಕೆ ಇದು ರತ್ನಪ್ರಾಯವಾಗಿದೆ. ಇದನ್ನು ನೋಡಿದವರೆಲ್ಲಾ "ಕೃಷ್ಣ ಕೃಷ್ಣ" ಎಂದು ಭಗವಂತನ ನಾಮೋಚ್ಚರಣೆ ಮಾಡಿ, ಪುಣ್ಯ ಪಡೆಯುಲೂ ಅವಕಾಶ ಲಭಿಸಿದೆ ಪ್ರದರ್ಶನಾಲಯದಲ್ಲಿ ಇಂತಹ ಅನುಮೌಲ್ಯ ವಸ್ತು ಪ್ರದರ್ಶನವಾದುದರ ಕೀರ್ತಿಯು ಪ್ರದರ್ಶನದ ಕಾರ್ಯದರ್ಶಿ ಶ್ರೀ ಪಾವಂಜಿಯವರಿಗೂ ಸಮಿತಿಯ ಇತರ ಸದಸ್ಯರಿಗೂ ಸೇರಿದೆ ಎಂದರೆ ಅತಿಶಯೋಕ್ತಿಯಲ್ಲ.

ಧಾನ್ಯ ಕಾಪಾಡುವ ರೀತಿ

ಆಹಾರ ಧಾನ್ಯಗಳನ್ನು ಬೆಳೆಯುತಕ್ಕವರು, ಅವುಗಳನ್ನು ಕೊಡುವುದು ತೆಗೆದುಕೊಳ್ಳುವುದು ಮುಂತಾದ ವಹಿವಾಟು ನಡೆಸತಕ್ಕವರು ಅಥವಾ ಅವುಗಳನ್ನು ಬಳಸತಕ್ಕವರು — ಇವರೆಲ್ಲರೂ ಅವುಗಳನ್ನು ಆರೋಗ್ಯಶಾಸ್ತ್ರೀಯವಾದ ರೀತಿಯಲ್ಲಿ ಹೇಗೆ ಕಾಪಾಡಿಕೊಂಡು ಬರಬೇಕೆಂಬ ವಿಚಾರವಾಗಿ ಅನುಸರಿಸಬೇಕಾದ ಮುಖ್ಯ ನಿಯಮಗಳ ವಿಷಯದಲ್ಲಿ ಅವರಿಗೆ ತಿಳುವಳಿಕೆಯುಂಟಾಗುವಂತೆ ಮಾಡುವುದಕ್ಕಾಗಿ 12 ಅಂಶಗಳನ್ನು ವಿವರಿಸಿ ಸಾರ್ವಜನಿಕರ ತಿಳಿವಳಿಕೆಗಾಗಿ ಸರಕಾರದವರು ಒಂದು ಪ್ರಸಿದ್ಧ ಪತ್ರಿಕೆ ಹೊರಡಿಸಿದ್ದಾರೆ.

ಸೂಚನೆ— ಶ್ರೀ ಚಾಮುಂಡೇಶ್ವರಿ ಬಿಟ್ಟದ ಜಾತ್ರೆ ಪ್ರಯುಕ್ತ ನಾಳೆ ಪತ್ರಿಕೆಯ ಪ್ರಕಟಣೆ ಇಲ್ಲ. ಮ್ಯಾನೇಜರ್.

ರಕ್ತವೃದ್ಧಿಗೆ — ಧಾತುಪುಷ್ಟಿಗೆ

ಶಕ್ತಿಸುಧಾ

ಸೇವನೆಯೇ ಸುಲಭೋಪಾಯ

ಬೆಲೆ ಡಬ್ಬಿ ಒಂದಕ್ಕೆ ಒಂದುರೂಪಾಯಿ.

ಶಕ್ತಿಸುಧಾ, ೧೦೬೭ ಚಾಮರಾಜಪುರಂ ಮೈಸೂರು.

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್,
ಮೈಸೂರು.

ಹರಾಜು ನೋಟೀಸ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ : —

ಮೈಸೂರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿಗೆ ಸೇರಿದ ಕೆಲವು ಅತ್ಯುತ್ತಮವಾದ ಒಂಗ್ಲಾ ಸೈಟುಗಳನ್ನು ತಾರೀಖು 12–9–1945 ನೇ ಹರಾಜು ಇಸ್ತಿಹಾರ್‌ನಾನೆಯ ಷರತ್ತು ಪ್ರಕಾರ ತಾರೀಖು 20–10–1945 ರಿಂದ 23–10–1945 ರ ವರೆಗೆ ಸೈಟುಗಳ ಬಳಿ ಒಪೆರಂಗವಾಗಿ ಹರಾಜು ಮಾಡಲಾಗುತ್ತೆ. ವಿವರಗಳನ್ನು ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಆರ್. ರಾಮಚಂದ್ರರಾವ್ ಬಾಂಭೋರೆ
ಛೇರ್ಮನ್

ದಸರಾ ಎಗ್ಜಿಬಿಷನ್
ಸ್ಟಾಲ್ ಜಿ 15

ಇಲ್ಲಿ ಏನಿದೆ?—

* ದೋಸೆ ಹಿಟ್ಟು ಅರೆಯುವ ಮಿಷನ್ (ಕರೆಂಟ್ ಸಹಾಯದಿಂದ)
* ಬಿ. ಟಿ. ಹೆಚ್. ಎಲೆಕ್ಟ್ರಿಕ್ ಮೋಟಾರುಗಳು 1/4 H. P. to 40 H. P. : 25 cycles.
* ಇತರ ವಿಷನರಿ ಸಾಮಾನುಗಳು.

MYSORE ELECTRIC
& Machinery Co.,
Chickpet — Bangalore City

AT Opera—
2 nd Week

ರಂಜಿತ್, ಟಿ. ಆರ್, ರಾಜಕುಮಾರಿ
ಕೆ. ಎಲ್. ವಿ. ವಸಂತ,
ಕೃಷ್ಣ, ಮಧುರಂ ಪಾತ್ರವಹಿಸಿರುವ

ಶಾಲಿವಾಹನ
(ತಮಿಳು)

Morning Shows
From 11-10-45
Tarzan Triumphs

ಆಮಂತ್ರಣೆ
ಅತಿಸಾರಗಳಿಗೆ
.... ಖಾತ್ರಿ ....
ಗುಣಕಾರಿಯಾದ
ಡಿಸೆಂಟಿಸೆಡ್
ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತೆ.
— ಸ್ವಾಕಿಸ್ಟರು —
ರಘುಲಾಲ್ ಅಂಡ್ ಕೊ.
ಟಿ. ಸಿ. ನಟರಾಜ್ ಅಂಡ್ ಕೊ.
— ಹಂಚುವವರು —
ಕಾಂತರಾಜ್ ಅಂಡ್ ಕೊ.
ರವೇ ಬೀದಿ, ಮೈಸೂರು.

At Ranjit
Humayun
6 ನೇ ವಾರ

ರಣಜಿತ್ ಟಾಕೀಸಿನಲ್ಲಿ
.... ಹುಮಾಯೂರ್....
(ಹಿಂದಿ)
ಅಶೋಕ ಕುಮಾರ್, ಚಂದ್ರಮೋಹಕ್
ವೀಣಾ, ನರ್ಗಿಸ್, ಷಾ ನವಾಸ್
ಪಾತ್ರವಹಿಸಿರುವರು

1 ಕಸವಿದ್ದಲ್ಲಿ ಖಾಯಿಲೆ.

2 ಕಸವನ್ನೆಲ್ಲಾ ಮುನಿಸಿಪಲ್ ತಿಪ್ಪೆಯಲ್ಲೇ ಹಾಕಿರಿ. ನಿಮ್ಮ ಮಕ್ಕಳನ್ನು ರಸ್ತೆಗಳಲ್ಲಿ ಹೇಸಿಗೆ ಮಾಡಲು ಬಿಡಬೇಡಿರಿ.

[ಮೈ. ಪೌರಸಭಾ ಪ್ರಕಟಣೆ ಸಮಿತಿ

ಅರ್ಜುನ

ಸಾಮಾಜಿಕ
ಭಾವಪರಿಪೂರ್ಣವಾದ ಕಥೆ

ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೂಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ, ವೋಸ್ಟೇಜು 1 ಆಣೆ. ಮುಂಗಡ ಕಳುಹಿಸಬೇಕು.

ದೊರೆಯುವ ಸ್ಥಳ—
ಸತ್ಯವಾದಿ ಆಫೀಸ್, ಮೈಸೂರು

ಸತ್ಯವಾದಿ
ದಿನ ಪತ್ರಿಕೆ

ಸ್ಥಳದಲ್ಲಿ — ತಿಂಗಳಿಗೆ 6 ಆಣೆ
ಸತ್ಯವಾದಿ ಸೋಮವಾರದ ಸಂಚಿಕೆಗೆ ಎಲ್ಲಾ ಊರುಗಳಲ್ಲೂ ಏಜಂಟರ್ಲು ಬೇಕಾಗಿದ್ದಾರೆ. ವಿಷಯುಗಳಿಗೆ ಬರೆಯಿರಿ. ಅಂಚೆ ವೆಚ್ಚ ಸೇರಿ ಪರಸ್ಥಳಕ್ಕೆ 1-12-0

ಮ್ಯಾನೇಜರ್, ಸತ್ಯವಾದಿ
ಚಾಮರಾಜಪುರಂ, ಮೈಸೂರು

TALK–A–TONE
(Pioneer Film-mag of S. India)
Local Agent—D. Mahadev
Opera Talkies, Mysore

Edited, Printed and published by M. S. Krishna Rao, at the Satvavadi Press, Chamaraja Agrahar, Mysore